**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ**

ಉಪಸ್ಥಿತರುಃ ಶ್ರೀ ಸಿದ್ದರಾಜು, ಎನ್. ಕೆ., ಬಿ.ಎ., ಎಲ್.ಎಲ್.ಬಿ.,
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದಾವಣಗೆರೆ.

**ದಿನಾಂಕಃ 01 ನೇ ಜೂನ್ 2023**

**ಅಸಲು ದಾವೆ ಸಂಖ್ಯೆಃ 381/2022**

ವಾದಿಗಳು : ಶ್ರೀಮತಿ ರೇಣುಕಮ್ಮ ಕೋಂ ಲೇಟ್ ಬಸವರಾಜಪ್ಪ,

ವಿರುದ್ದ

ಪ್ರತಿವಾದಿಗಳುಃ ಚನ್ನಬಸಪ್ಪ ಬಿನ್ ಸಿದ್ದಪ್ಪ

**ಮಧ್ಯಂತರ ಅರ್ಜಿ ಸಂಖ್ಯೆ.1**

ಅರ್ಜಿದಾರರು : ಶ್ರೀಮತಿ ರೇಣುಕಮ್ಮ ಕೋಂ ಲೇಟ್ ಬಸವರಾಜಪ್ಪ,

ವಿರುದ್ದ

ಎದುರುದಾರರು : ಚನ್ನಬಸಪ್ಪ ಬಿನ್ ಸಿದ್ದಪ್ಪ

**ಮಧ್ಯಂತರ ಅರ್ಜಿ ಸಂಖ್ಯೆ.1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ.151 ರ ಮೇಲಿನ ಆದೇಶ**

ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ.1 ರ ಜೊತೆಯಲ್ಲಿ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಕಾರಣಗಳಿಗಾಗಿ ಪ್ರತಿವಾದಿಯಾಗಲೀ ಅಥವಾ ಅವರ ಸಹಚರರಾಗಲೀ, ಪ್ರೇರೇಪಿತರಾದವರಾಗಲೀ ಅಥವಾ ಅವರಿಂದ ಉತ್ತೇಜನಕ್ಕೆ

ಒಳಗಾದವರಾಗಲೀ ಅಥವಾ ಬೇರೆ ಯಾರೇ ವ್ಯಕ್ತಿಗಳಾಗಲೀ ವಾದಿಯ ಷೆಡ್ಯೂಲ್ ಸ್ವತ್ತುಗಳ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಆತಂಕಪಡಿಸದಂತೆ ದಾವಾ ಇತ್ಯಾರ್ಥ ಆಗುವವರೆಗೆ ತಾತ್ಕಾಲಿಕ ಏಪಕ್ಷೀಯ ನಿರ್ಭಂದಕಾಜ್ಞೆ ಆದೇಶ ನೀಡುವ ಮೂಲಕ ನಿರ್ಭಂಧಿಸಬೇಕೆಂದು ಕೋರಿ ಪ್ರಸ್ತುತ ಅರ್ಜಿಯನ್ನು ದಾಖಲಿಸಿರುತ್ತಾರೆ.

2. ವಾದಿಯು ಮಧ್ಯಂತರ ಅರ್ಜಿಯ ಜೊತೆಯಲ್ಲಿ ಸಲ್ಲಿಸಿರುವ ತನ್ನ ಪ್ರಮಾಣ ಪತ್ರದಲ್ಲಿ ತಾನು ಈ ದಾವೆಯಲ್ಲಿ ವಾದಿ ಆಗಿದ್ದು, ಪ್ರತಿವಾದಿಯ ವಿರುದ್ದ ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಘೋಷಣಾತ್ಮಕ ಹಾಗೂ ಶಾಶ್ವತ ನಿರ್ಬಂದಕಾಜ್ಞೆ ಹಾಗೂ ಇತರೇ ಪರಿಹಾರಗಳನ್ನು ಕೋರಿ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿಯ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ಸದರಿ ಸ್ವತ್ತಿನ ಶಾಂತಿಯುತ ಸ್ವಾಧೀನದಲ್ಲಿ ವಾದಿ ಇದ್ದು, ಗ್ರಾಮ ಪಂಚಾಯಿತಿಗೆ ನಿಯಮಿತವಾಗಿ ತೆರಿಗೆಯನ್ನು ಪಾವತಿ ಮಾಡುತ್ತಾ ಬಂದಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಸಂಖ್ಯೆ.82/ಪಿ1 ಆಗಿದ್ದು, ಸದರಿ 82/ಪಿ1 ಸ್ವತ್ತಿನ ಪೋಡ್ ನಂ.ಪಿ ಮತ್ತು ಪಿ1 ಎಂದು ಪೋಡ್ ಆಗಿ ಮಾಡಲಾಗಿರುತ್ತದೆ, ಸದರಿ ಆಸ್ತಿ ಸಂಖ್ಯೆ.82/ಪಿ ಮತ್ತು 82/ಪಿ1 ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳಾಗಿರುತ್ತವೆ. ದಾವಾ ಎ ಷೆಡ್ಯೂಲ್ ಸ್ವತ್ತು ವಾದಿಯ ಮನೆಯಾಗಿರುತ್ತದೆ, ದಾವಾ ಬಿ ಷೆಡ್ಯೂಲ್ ಸ್ವತ್ತು ಖುಲ್ಲಾ ಜಾಗ ಆಗಿದ್ದು, ವಾದಿಯು ನಿವೇಶನದಲ್ಲಿ ನಿರ್ಮಿಸಲ್ಪಟ್ಟ ಬುನಾದಿ

ಹಾಕಿರುವ ಸ್ವತ್ತಾಗಿರುತ್ತದೆ, ಸದರಿ ಸ್ವತ್ತಿನಲ್ಲಿ ವಾದಿಯು ಕಟ್ಟಡ ಕಟ್ಟಲು ಪ್ರತಿವಾದಿ ಕಾನೂನು ಬಾಹೀರವಾಗಿ ಅಡೆತಡೆಯನ್ನುಂಟು ಮಾಡಿರುತ್ತಾರೆ, ಆದ್ದರಿಂದ ವಾದಿಯನ್ನು ನಿರ್ಭಂದಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

3. ನ್ಯಾಯಾಲಯದಿಂದ ಸಮನ್ಸ್ ಜಾರಿ ಆದ ನಂತರ ಪ್ರತಿವಾದಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಪ್ರತಿವಾದ ಪತ್ರವನ್ನು ದಾಖಲಿಸಿರುತ್ತಾರೆ ಹಾಗೂ ಸದರಿ ಪ್ರತಿವಾದ ಪತ್ರವನ್ನು ಮಧ್ಯಂತರ ಅರ್ಜಿ ಸಂಖ್ಯೆ.1 ಕ್ಕೆ ತಕರಾರು ಎಂದು ತೆಗೆದುಕೊಳ್ಳುವಂತೆ ಪ್ರಾರ್ಥಿಸಿರುತ್ತಾರೆ.

4. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಾದಿಯು ತನ್ನ ವಾದಪತ್ರದಲ್ಲಿ ಹೇಳಿದ ಎಲ್ಲಾ ಸಂಗತಿಗಳನ್ನು ತಳ್ಳಿ ಹಾಕಿರುತ್ತಾರೆ. ಮುಂದುವರೆದು ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಯು ಸ್ವಾಧೀನಾನುಭವದಲ್ಲಿರುತ್ತಾರೆ, ಸದರಿ ಸ್ವತ್ತಿನಲ್ಲಿ ಪ್ರತಿವಾದಿಯು ಬುನಾದಿಯನ್ನು ಹಾಕಿರುತ್ತಾರೆ, ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಯು ಸ್ವಾಧೀನಾನುಭವದಲ್ಲಿರುವುದಿಲ್ಲ, ಆದ್ದರಿಂದ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವಂತೆ ಪ್ರಾರ್ಥಿಸಿರುತ್ತಾರೆ.

5. ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು. ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

6. ಈ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

1. ವಾದಿಯು ಮೇಲ್ನೋಟದ ದಾವೆಯನ್ನು ಹೊಂದಿರುತ್ತಾರೆ ಎನ್ನುವ ಸಂಗತಿಯನ್ನು ಸಾಬೀತುಪಡಿಸಿರುವನೇ ?
2. ವಾದಿಯ ಪರವಾಗಿ ತುಲಾನತ್ಮಾಕ ನ್ಯಾಯ ಇರುತ್ತದೆ ಎನ್ನುವುದನ್ನು ಸಾಬೀತುಪಡಿಸಿರುವನೇ ?
3. ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎನ್ನುವ ಸಂಗತಿಯನ್ನು ಸಾಬೀತುಪಡಿಸಿರುವನೇ ?
4. ಏನು ಆದೇಶ ?

7. ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

| | |
|---|---|
| ಅಂಶ ನಂ.1 | : ನಕರಾತ್ಮಕ |
| ಅಂಶ ನಂ.2 | : ನಕರಾತ್ಮಕ |
| ಅಂಶ ನಂ.3 | : ನಕರಾತ್ಮಕ |
| ಅಂಶ ನಂ.4 | : ಅಂತಿಮ ಆದೇಶದಂತೆ ಈ ಕೆಳಕಂಡ |

**ಕಾರಣಗಳು**

8**. ಅಂಶ ಸಂಖ್ಯೆ.1 ರಿಂದ 3:** ಅಂಶ.1 ರಿಂದ 3 ಅಂಶಗಳು ಒಂದಕ್ಕೊಂದು ಅಂತರಿಕ ಸಂಬಂದ ಹೊಂದಿರುವುದರಿಂದ ಒಂದು ಅಂಶದ ಮೇಲಿನ ಚರ್ಚೆಯಲ್ಲಿನ ಸಂಗತಿಗಳು ಮತ್ತೊಂದು ಅಂಶದ ಮೇಲಿನ ಚರ್ಚೆಯಲ್ಲಿ

ಪುನರಾವರ್ತನೆಯಾಗುವುದನ್ನು ತಪ್ಪಿಸುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿಯ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ಸದರಿ ಸ್ವತ್ತಿನ ಶಾಂತಿಯುತ ಸ್ವಾಧೀನದಲ್ಲಿ ವಾದಿ ಇರುತ್ತಾರೆ. ಸದರಿ ಆಸ್ತಿ ಸಂಖ್ಯೆ.82/ಪಿ ಮತ್ತು 82/ಪಿ1, ದಾವಾ ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳಾಗಿರುತ್ತವೆ. ದಾವಾ ಎ ಷೆಡ್ಯೂಲ್ ಸ್ವತ್ತು ವಾದಿಯ ಮನೆಯಾಗಿರುತ್ತದೆ, ದಾವಾ ಬಿ ಷೆಡ್ಯೂಲ್ ಸ್ವತ್ತು ಖುಲ್ಲಾ ಜಾಗ ಆಗಿದ್ದು, ವಾದಿಯು ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಮನೆ ನಿರ್ಮಿಸಲು ಬುನಾದಿಯನ್ನು ಹಾಕಿರುತ್ತಾರೆ, ಈ ಸಂದರ್ಭದಲ್ಲಿ ಪ್ರತಿವಾದಿಗೆ ಕಟ್ಟಡ ಕಟ್ಟಲು ತೊಂದರೆ ಉಂಟು ಮಾಡಿರುತ್ತಾರೆ, ಅಲ್ಲದೇ ಎ ಸ್ವತ್ತಿನಲ್ಲಿರುವ ಮನೆಗೆ ಹೊಂದಿಕೊಂಡಂತೆ ಬಿ ಸ್ವತ್ತಿನಲ್ಲಿ ಕಟ್ಟಡ ಕಟ್ಟುತ್ತಿರುವುದರಿಂದ ಸಂಬಂಧಿಸಿದ ಪ್ರಾಧಿಕಾರದಿಂದ ಪರವಾನಿಗೆ ಪಡೆಯುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಪ್ರತಿವಾದಿಯನ್ನು ನಿರ್ಭಂದಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

9. ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಪ್ರತಿವಾದಿಯು ವಾದಿಯು ವಾದಪತ್ರದಲ್ಲಿ ಹೇಳಿದ ಎಲ್ಲಾ ಸಂಗತಿಗಳನ್ನು ತಳ್ಳಿ ಹಾಕಿರುತ್ತಾರೆ, ಮುಂದುವರೆದು ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಯು

ಸ್ವಾಧೀನಾನುಭವದಲ್ಲಿರುತ್ತಾರೆ, ಸದರಿ ಸ್ವತ್ತಿನಲ್ಲಿ ಪ್ರತಿವಾದಿಯು ಪರವಾನಿಗೆಯನ್ನು ಪಡೆದು ಬುನಾದಿಯನ್ನು ಹಾಕಿರುತ್ತಾರೆ, ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಯು ಸ್ವಾಧೀನಾನುಭವದಲ್ಲಿರುವುದಿಲ್ಲ, ಆದ್ದರಿಂದ ಅರ್ಜಿಯನ್ನು ವಜಾಗೊಳಿಸುವಂತೆ ಪ್ರಾರ್ಥಿಸಿರುತ್ತಾರೆ.

10. ವಾದಿಯು ದಾವಾ ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳ ಸ್ವಾಧೀನಾನುಭವದಲ್ಲಿರುವ ಸಂಗತಿಯನ್ನು ಸಾಭೀತು ಪಡಿಸಲು ಹೌಸ್ ಲೀಸ್ಟ್ ರಿಜಿಸ್ಟರ್, ಕರ ಆಕರಣೆಯ ರಿಜಿಸ್ಟರ್, ಕಂದಾಯ ಪಾವತಿಸಿದ ರಶೀದಿ ಮತ್ತು ಭಾವಚಿತ್ರವನ್ನು ಹಾಜರುಪಡಿಸಿರುತ್ತಾರೆ.

11. ಪ್ರತಿವಾದಿಯು ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿರುವ ಸಂಗತಿಯನ್ನು ಸಾಭೀತು ಪಡಿಸಲು ಹೌಸ್ ಲೀಸ್ಟ್ ರಿಜಿಸ್ಟರ್ , ಕಂದಾಯ ಪಾವತಿಸಿದ ರಶೀದಿ, ನಮೂನೆ.9, ಎ ಸ್ಕೆಚ್, ಕಾಮಗಾರಿ ಆದೇಶದ ಪತ್ರ ಮತ್ತು ಭಾವಚಿತ್ರವನ್ನು ಹಾಜರುಪಡಿಸಿರುತ್ತಾರೆ.

12. ವಾದಿಯು ಹಾಜರುಪಡಿಸಿರುವ ಹೌಸ್ ಲೀಸ್ಟ್ ರಿಜಿಸ್ಟರ್ ನಲ್ಲಿ ಹೊಸ ನಂ.100, ಹಳೆ ನಂ.82/ಪಿ1 ವಿಸ್ತೀರ್ಣ ಪೂರ್ವ ಪಶ್ಚಿಮ 11 ಇಂಟು 9, ಉತ್ತರ ದಕ್ಷಿಣ 99 ಪೂರ್ವ ಕ್ಕೆ ರೇವಣಸಿದ್ದಪ್ಪನ ಖಣ, ಪಶ್ಚಿಮಕ್ಕೆ ನೀಲಮ್ಮನ ಮನೆ,

ಉತ್ತರಕ್ಕೆ ಸರ್ಕಾರಿ ದಾರಿ, ದಕ್ಷಿಣಕ್ಕೆ ಇದೇ ಪೈಕಿ ಮನೆ ಎಂದು ನಮೂದಾಗಿರುತ್ತದೆ, ಆದರೆ ಸದರಿ ದಾಖಲೆಯಲ್ಲಿ 82/ಪಿ1 ಸ್ವತ್ತಿನ ವಿಸ್ತೀರ್ಣವನ್ನು ಅಡಿ ಲೆಕ್ಕದಲ್ಲಿ ಹೇಳಲಾಗಿದೆಯೇ? ಅಥವಾ ಗಜಲೆಕ್ಕದಲ್ಲಿ ಹೇಳಲಾಗಿದೆಯೇ? ಅಥವಾ ಮೀಟರ್ ಲೆಕ್ಕದಲ್ಲಿ ಹೇಳಲಾಗಿದೆಯೇ? ಎಂಬ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ.

13. ವಾದಿಯು ಕುರುಡಿ ಗ್ರಾಮ ಪಂಚಾಯಿತಿಯವರು ನೀಡಿರುವ ಹೌಸ್ ಲೀಸ್ಟ್ ಪುಸ್ತಕ ದಲ್ಲಿ 2005-06 ನೇ ಸಾಲಿಗೆ ಸಂಬಂಧಿಸಿದಂತೆ ಹೊಸ ನಂ.82/ಪಿ, ಸ್ವತ್ತಿನ ವಿಸ್ತೀರ್ಣ, 21 ಇಂಟು 14, ಖಾಲಿ ಜಾಗ 9 ಇಂಟು 3 ಗಜ ಎಂದು ನಮೂದಿಸಲಾಗಿರುತ್ತದೆ, ಆದರೆ ಸದರಿ ಸಂಗತಿಯು ಹೌಸ್ ಲೀಸ್ಟ್ ರಿಜಿಸ್ಟರ್ ನಲ್ಲಿ ಕಂಡು ಬರುವುದಿಲ್ಲ, ಆದ್ದರಿಂದ ಹೌಸ್‌ಲೀಸ್ಟ್ ರಿಜಿಸ್ಟರ್ ದಾಖಲೆಯು 2005-06 ನೇ ಸಾಲಿನ ಹೌಸ್ ಲೀಸ್ಟ್ ಪುಸ್ತಕಕ್ಕೆ ವಿರುದ್ಧವಾಗಿರುತ್ತದೆ. ವಾದಿಯು ಗ್ರಾಮ ಪಂಚಾಯಿತಿಯ ಆಸ್ತಿ ಸಮೀಕ್ಷೆಯನ್ನು ಹಾಜರು ಪಡಿಸಿದ್ದು, ಸದರಿ ದಾಖಲೆಯಲ್ಲಿ ಹಳೆ ನಂ.82 ಚನ್ನಬಸಪ್ಪ ತಂದೆ ಕರಿಯಪ್ಪ, ಅನುಭವದಾರರು ಕೆ.ಎನ್. ಪುಷ್ಪಲತಾ ಖಾಲಿ ಜಾಗದಲ್ಲಿ 15 ಇಂಟು 9 ಕಟ್ಟಡ ಇರುತ್ತದೆ ಎಂದು ನಮೂದಾಗಿರುತ್ತದೆ. 82/ಪಿ ಲೋಕೇಶ್ವರ ಮಹಾದೇವಪ್ಪ ಅನುಭವದಾರ ಲೋಕೇಶ್ವರಯ್ಯ ಖಾಲಿ ಜಾಗ 4 ಮತ್ತು 15 ಮನೆ ಎಂದು ನಮೂದಾಗಿರುತ್ತದೆ, ಆದರೆ ಸದರಿ ದಾಖಲೆಯಲ್ಲಿ ಸದರಿ ಆಸ್ತಿಗಳ ವಿಸ್ತೀರ್ಣವನ್ನು ನಮೂದಿಸಿರುವುದಿಲ್ಲ, ಆದ್ದರಿಂದ ವಾದಿ

ಹಾಜರುಪಡಿಸಿರುವ ದಾಖಲೆಗಳು ಒಂದು ದಾಖಲೆಗೆ ಮತ್ತೊಂದು ದಾಖಲೆಯು ವ್ಯತಿರಿಕ್ತವಾಗಿರುತ್ತದೆ.

14. ಪ್ರತಿವಾದಿಯು ಹಾಜರುಪಡಿಸಿರುವ 2011 ನೇ ಸಾಲಿನ ಹೌಸ್ ಲೀಸ್ಟ್ ರಿಜಿಸ್ಟರ್ ಆಗಿದ್ದು, ಹೊಸ ನಂ.113 ಹಳೆ ನಂ.82 ಚನ್ನಬಸಪ್ಪ ಕೆ.ಎ. ತಂದೆ ಸಿದ್ದಪ್ಪ ವಿಸ್ತೀರ್ಣ 15 ಇಂಟು 48 ಅಡಿ ಪೂರ್ವಕ್ಕೆ ಮಂಜಪ್ಪನ ಖಣ, ಪಶ್ಚಿಮಕ್ಕೆ ಲೋಕೇಶಪ್ಪನ ಖಣ, ಉತ್ತರಕ್ಕೆ ಮಂಜಪ್ಪನ ಖಣ, ದಕ್ಷಿಣಕ್ಕೆ ದಾರಿ ಎಂದು ನಮೂದಾಗಿರುತ್ತದೆ. ಅಲ್ಲದೇ ಪ್ರತಿವಾದಿಯು ಸದರಿ ಸ್ವತ್ತಿಗೆ 2011 ರಿಂದ ಕಂದಾಯ ಪಾವತಿಸಿದ ರಶೀದಿಗಳನ್ನು ಹಾಜರುಪಡಿಸಿರುತ್ತಾರೆ. ಅಲ್ಲದೇ 11.ಎ ನಕಾಶೆಯಲ್ಲಿ ಆಸ್ತಿ ಸಂಖ್ಯೆ.82 ವಿಸ್ತೀರ್ಣ 4.49 ಇಂಟು 13.71 ಚೆಕ್ ಬಂದಿ ಉತ್ತರಕ್ಕೆ ಮಂಜಪ್ಪನ ಖಣ, ಪೂರ್ವಕ್ಕೆ ಮಂಜಪ್ಪನ ಖಣ, ಪಶ್ಚಿಮಕ್ಕೆ ಲೋಕೇಶ್ವರಪ್ಪನ ಮನೆ, ದಕ್ಷಿಣಕ್ಕೆ ದಾರಿ ಸ್ವತ್ತಿನಲ್ಲಿ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇರುವುದಾಗಿ ನಮೂದಾಗಿರುತ್ತದೆ. ಸದರಿ ಸ್ವತ್ತಿನಲ್ಲಿ ಕಟ್ಟಡ ಕಟ್ಟಲು ಪ್ರತಿವಾದಿಗೆ ಮನೆ ಮಂಜೂರಾತಿ ಕಾಮಗಾರಿ ಆದೇಶ ಪತ್ರವನ್ನು ವಸತಿ ಇಲಾಖೆಯಿಂದ ನೀಡಲಾಗಿರುತ್ತದೆ, ಆದ್ದರಿಂದ ಪ್ರತಿವಾದಿಯು ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದು, ಕಟ್ಟಡ ಕಟ್ಟಲು ಬುನಾದಿ ಹಾಕಿರುತ್ತಾರೆ ಎನ್ನುವ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

15. ವಾದಿ ತನ್ನ ವಾದ ಪತ್ರದಲ್ಲಿ ತಾನೇ ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಕಟ್ಟಡ ಕಟ್ಟಲು ಬುನಾದಿ ಹಾಕಿರುವುದಾಗಿ ಹೇಳಿರುತ್ತಾರೆ, ಆದರೆ ಈ ಬಗ್ಗೆ ಸಂಬಂಧಿಸಿದ ಕಛೇರಿಯಿಂದ ಯಾವುದೇ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ, ವಾದಿಯು ತನ್ನ ವಾದ ಪತ್ರದಲ್ಲಿ ದಾವಾ ಎ ಷೆಡ್ಯೂಲ್ ಸ್ವತ್ತಿಗೆ ಲಗತ್ತಾಗಿರುವ ಖಾಲಿ ಜಾಗದಲ್ಲಿ ಕಟ್ಟಡ ಕಟ್ಟಲು ಪರವಾನಿಗೆಯ ಅಗತ್ಯ ಇರುವುದಿಲ್ಲ, ಆದ್ದರಿಂದ ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲವೆಂದು ಹೇಳಿರುತ್ತಾರೆ, ಆದರೆ ಸದರಿ ಸಂಗತಿ ನಂಬಲಾರ್ಹವಾದ ಸಂಗತಿಯಾಗಿರುವುದಿಲ್ಲ, ಆದ್ದರಿಂದ ಈ ಮೇಲೆ ಹೇಳಿದ ಎಲ್ಲಾ ದಾಖಲೆಗಳನ್ನು ಅವಲೋಕಿಸಿದಾಗ ವಾದಿಯು ಮೇಲ್ನೋಟದ ದಾವೆಯನ್ನು ಹೊಂದಿರುವುದಿಲ್ಲ ಎನ್ನುವ ಸಂಗತಿಯು ಮೇಲ್ನೋಟಕ್ಕೆ ಕಂಡು ಬರುತ್ತದೆ, ಆದ್ದರಿಂದ ವಾದಿಯು ತನ್ನ ಮಧ್ಯಂತರ ಅರ್ಜಿ ಸಂಖ್ಯೆ.1 ರಲ್ಲಿ ಕೇಳಿದ ಯಾವುದೇ ಪರಿಹಾರಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎನ್ನುವ ತೀರ್ಮಾನಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಈ ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಅಂಶ ಸಂಖ್ಯೆ.1 ರಿಂದ 3 ನ್ನು ನಕರಾತ್ಮಕವಾಗಿ ಉತ್ತರಿಸಿರುತ್ತೇನೆ.

16. **ಅಂಶ ಸಂಖ್ಯೆ.4:** ಈ ಮೇಲಿನ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

## ಆದೇಶ

ಮಧ್ಯಂತರ ಅರ್ಜಿ ಸಂಖ್ಯೆ.1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ.151 ರ ಅಡಿಯಲ್ಲಿ ವಾದಿಯು ದಾಖಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿದೆ.

((ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರು ಉಕ್ತಲೇಖನವನ್ನು ತೆಗೆದುಕೊಂಡು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 1 ನೇ ಜೂನ್ 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/

**(ಸಿದ್ದರಾಜು. ಎನ್.ಕೆ.)**
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದಾವಣಗೆರೆ.